ಶುಭವಾರ್ತೆ

> ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ.—ಅ.ಕೃ.;2:38.

## ಒಳ್ಳೆಯ ಕಾರ್ಯಗಳಷ್ಟೇ ಸಾಕೋ?

(ಹಿಂದಿನ ಸಂಚಿಕೆಯಿಂದ

ಆದ್ದರಿಂದ ರಕ್ಷಣೆಗೆ ದೇವರ ಬಲವಾದ ಸುವಾರ್ತೆಯನ್ನು ತಿಳಿದು ಅದನ್ನು ನಂಬುವ ಮೊದಲು ನಾವು "ದೇವರ ರಾಜ್ಯವನ್ನು ಮತ್ತು ಯೇಸು ಕ್ರಿಸ್ತನ ಹೆಸರನ್ನು ಕುರಿತ ವಿಷಯಗಳನ್ನು" ತಿಳಿಯಬೇಕು. ಒಂದಿಲ್ಲದೆ ಮತ್ತೊಂದು ಪರಿಣಾಮಕಾರಿಯಲ್ಲದ್ದಾಗಿದೆ. 'ದೇವರ ರಾಜ್ಯದ ವಿಷಯವಾಗಿ" ಅರಿವಿಲ್ಲದಿರುವುದೆಂದರೆ, ಸುವಾರ್ತೆಯ ಬಗ್ಗೆ ಅಜ್ಞಾನಿಯಾಗಿರುವುದೆಂದರ್ಥ. ಒಬ್ಬ ಮನುಷ್ಯನು ಕ್ರಿಸ್ತನ ಶಿಲುಬೆಗೇರಿಸುವಿಕೆ, ಪುನರುತ್ಥಾನ ಮತ್ತು ದಿವಾರೋಹಣಗಳ —ಚಾರಿತ್ರಿಕ ಘಟನೆಗಳ ಬಗ್ಗೆ ಬಹು ಚೆನ್ನಾಗಿ ತಿಳಿದುಕೊಂಡಿರಬಹುದು; ಆದರೆ ಅದರ ನಿಜವಾದ ತಾತ್ವಿಕ ಅರ್ಥ ಮತ್ತು 'ಮುಂದೆ ಬರುವ ಮಹಿಮೆಯೊಂದಿಗೆ ಅದರ ಸಂಬಂಧ ಇವುಗಳನ್ನು ಸರಿಯಾಗಿ ತಿಳಿದುಕೊಳ್ಳದಿದ್ದಲ್ಲಿ, ಆ ತಿಳುವಳಿಕೆಯು ದೇವರ ಉದ್ದೇಶಗಳಿಗನ್ವಯವಾಗಿ ತಿಳುವಳಿಕೆಯೇ ಅಲ್ಲ.

'ದೇವರ ರಾಜ್ಯವನ್ನು ಮತ್ತು ಯೇಸು ಕ್ರಿಸ್ತನ ಹೆಸರನ್ನು ಕುರಿತ ವಿಷಯಗಳೆಂದು" ಕರೆಯಲ್ಪಡುವ ಸುವಾರ್ತೆಯಲ್ಲಿರುವ ಕೆಲವು ನಿರ್ದಿಷ್ಟ ವಿಷಯಗಳ ಬೋಧನೆಯನ್ನು ನಂಬುವುದೇ ರಕ್ಷಣೆಗೆ ಬೇಕಾದ ಮೂಲಭೂತ ನಿಯಮಗಳಲ್ಲೊಂದಾಗಿದೆಯೆಂದು ನಾವು ಇಲ್ಲಿಯವರೆಗೆ ತಿಳಿದಂತಾಯಿತು. ಆ "ವಿಷಯಗಳು" ದೈವೀಕ ಸತ್ಯದ ಪೂರ್ಣ ವೃತ್ತವಾಗಿದೆ. ಅವು ಸೃಷ್ಟಿಕರ್ತನನ್ನೇ ಅಲ್ಲದೆ ಪಾಪದ ಹಾಗೂ ಕ್ಷಯಿಯಲ್ಲದ ಜೀವಿಗಳೆಂದು ಆತನೊಂದಿಗೆ ನಮ್ಮ ಸಂಬಂಧ, ಯೇಸುಕ್ರಿಸ್ತನ ಕುರಿತ ಬೋಧನೆಗಳು; ನಮ್ಮ ಜನಾಂಗದೊಂದಿಗೆ ಯೆಹೋವನ ಕಾರ್ಯಗಳು; ಆತನ ವಾಗ್ದಾನಗಳು—ರಕ್ಷಣೆಗೆ ಆತನು ಒದಗಿಸಿರುವ ಮಾರ್ಗ; ಆತನಿಗೆ ನಮ್ಮ ಕರ್ತವ್ಯಗಳು ಇವೇ ಮೊದಲಾದ ಜ್ಞಾನವನ್ನು ಅವಲಂಬಿಸಿರುತ್ತವೆ. ಒಬ್ಬ ಮನುಷ್ಯನು ನಿರೀಕ್ಷೆ ಹೊಂದಿರಲು ಏನೊಂದೂ ನಿರ್ದಿಷ್ಟವಾದುದು ಇಲ್ಲದಿದ್ದಲ್ಲಿ, ಆತನ ನಿರೀಕ್ಷೆಯು ಹೇಗೆ ಪರಿಣಾಮಕಾರಿಯಾಗಿರುತ್ತದೆ? ಆತನ ನಂಬಿಕೆಗೆ ನಿರ್ದಿಷ್ಟವಾದ ಉದ್ದೇಶವಿಲ್ಲದಿದ್ದಲ್ಲಿ, ಆತನ ನಂಬಿಕೆಯನ್ನು ಆಚರಣೆಗೆ ತರಲು ಹೇಗೆ ಸಾಧ್ಯ? ತಾತ್ವಿಕ ಕ್ರೈಸ್ತತ್ವದ ಸೊಗಸು ಏನೆಂದರೆ, ಅದು ಮನಸ್ಸಿಗೆ ಹೊರಕ್ಕೆ ತರಲು ಮತ್ತು ಅದರ ಉನ್ನತ ಆಕಾಂಕ್ಷೆಗಳನ್ನು ತೃಪ್ತಿಪಡಿಸಲು ಬೇಕಾದುದನ್ನು ನಿಖರವಾಗಿ ಒದಗಿಸುತ್ತದೆ.

ದೇವರ ಮಹತ್ತರ ಉದ್ದೇಶಗಳನ್ನು ನಾವು ತಿಳಿಯಬಹುದು. ಆತನು, ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ಆದುಕೊಂಡ ಜನಾಂಗವೂ, ರಾಜವಂಶದ ಯಾಜಕರೂ, ಮೀಸಲಾದ ಜನವೂ ಆದ ಸ್ವಕೀಯ ಪ್ರಜೆಯೊಂದನ್ನು ಸಿದ್ಧಗೊಳಿಸುತ್ತಿದ್ದಾನೆ (2 ಪೇತ್ರ 2:9). ಆತನು "ನೂತನ ಮನುಷ್ಯನನ್ನು ಧರಿಸಿಕೊಂಡು, ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇ ದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುವ" ತತ್ವದ ಮೇರೆ, (ಕೊಲೊಸ್ಸೆ 3:10) ಸಕಲ ಆತ್ಮೀಯ ಜ್ಞಾನವನ್ನೂ ಗ್ರಹಿಕೆಯನ್ನೂ ಕರ್ತನ ಚಿತ್ತವಾದ ತಿಳುವಳಿಕೆಯಿಂದ ತುಂಬಿದವರಾಗಿ (ಕೊಲೊಸ್ಸೆ 1:9) ಈ ಪ್ರಜೆಯನ್ನು ಸಿದ್ಧಪಡಿಸುತ್ತಿದ್ದಾನೆ. ಆದ್ದರಿಂದ ಮಾನವ ಕಲ್ಪಿತ ಬೋಧನೆಗಳೂ ಸಂಪ್ರದಾಯಗಳೂ ದೇವರ ಮುಂದೆ ಹುಚ್ಚುತನವಾಗಿವೆ.(1 ಕೊರಿಂಥ 3:19).

ಸತ್ಯವೇದದಲ್ಲಿರುವ ದೇವರ ಚಿತ್ತದ ನಿಖರವಾದ(ಪೂರ್ಣ) ಜ್ಞಾನ ಹಾಗೂ ಅದನ್ನು ನಂಬಿಕೆಯಿಂದ ನಡೆದುಕೊಳ್ಳುವುದರಿಂದ ಮಾತ್ರ ಮನುಷ್ಯನಿಗೆ ಅಂತ್ಯದಲ್ಲಿ ಪ್ರಯೋಜನವಾಗುತ್ತದೇ ಹೊರತು, ಬೇರೆ ಯಾವುದರಿಂದಲೂ ಅಲ್ಲ. "ನಮ್ಮ ನಂಬಿಕೆಯು ಮಾನುಷ ಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರ ವಾಕ್ಯದಲ್ಲಿ ನಿಂತಿದೆ" (1 ಕೊರಿಂಥ 2:5).

**ನಂಬಿಕೆಯೆಂದರೇನು?**

ನಂಬಿಕೆಯು ವಿಷಯಜ್ಞಾನದ ನಿರ್ದಿಷ್ಟ ಅಂಶಗಳಿಗೆ ಮನಸ್ಸಿನ ಒಪ್ಪಿಗೆಯಾಗಿರುತ್ತದೆ. ನಂಬಿಕೆಯು ಹುಟ್ಟುವ ಮೊದಲು, ಮನಸ್ಸಿಗೆ ವಿಷಯವು ತಿಳಿದಿರಬೇಕು. ಅಂದರೆ ಮೊದಲೇ ಅದು ಅರಿತಿರಬೇಕು ಅಥವಾ ನಂಬಿಕೆಯು ವಿಷಯದ ಬಗ್ಗೆ ಗೊತ್ತಿರಬೇಕು. ತಾತ್ವಿಕ ಅಂಶಗಳು ಮುಖ್ಯವಲ್ಲವೆನ್ನುವುದು ಎಷ್ಟು ಹುಚ್ಚುತನವಾಗಿದೆ.

ಆದ್ದರಿಂದ ಸುವಾರ್ತೆಯ ನಂಬಿಕೆಯೇ ರಕ್ಷಣೆಯ ಪ್ರಥಮ ನಿಯಮವಾಗಿದೆ. ಎಲ್ಲವೂ ಇಷ್ಟೇ ಅಲ್ಲ. ಒಬ್ಬ ವ್ಯಕ್ತಿಯು ದೇವರ ಮಹಿಮಾತಿಶಯದ ವಾಗ್ದಾನಗಳನ್ನು ನಂಬಬಹುದು ಆದರೆ ಅವುಗಳಲ್ಲಿ ಭಾಗಿಯಾಗದಿರಬಹುದು. ಅವನು ದೀಕ್ಷಾಸ್ನಾನ ಹೊಂದಬೇಕು. ``ಯಾರು ನಂಬಿ ದೀಕ್ಷಾಸ್ನಾನ ಹೊಂದುತ್ತಾರೋ ಅವರು ರಕ್ಷಿಸಲ್ಪಡುವರು'' (ಮಾರ್ಕ 16:16).

ಹೌದು, ಅಪೋಸ್ತಲರ ಕ್ರಮದಲ್ಲಿ ಇದೊಂದು ಮುಖ್ಯ ಸಂಗತಿಯಾಗಿದೆ. ಆದರೆ ಕ್ರಿಸ್ತರ ಹೆಸರನ್ನು ಹೊಂದಿರುವೆವೆಂಬ ಮಹಾ ಸಂಘಗಳು ಇಂದು ಇದನ್ನು ಕಡೆಗಣಿಸಿರುವುದು ವಿಷಾದಕರವಾದುದು. ಸರಳವಾಗಿ ತಿಳಿಸಲ್ಪಟ್ಟಿರುವ ಕ್ರಿಸ್ತನ ನಡವಳಿಕೆಯನ್ನು ಕ್ರೈಸ್ತ ಜನಾಂಗವು ಈ ರೀತಿಯಾಗಿ ಉಲ್ಲಂಘಿಸಿರುವುದು ನಿಜಕ್ಕೂ ಅತ್ಯಂತ ಶೋಚನೀಯವಾದುದು. ಹೊಸ ಒಡಂಬಡಿಕೆಯಲ್ಲಿ ಈ ವಿಷಯವನ್ನು ಬಹು ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವುದರಿಂದ, ಇದರ ಬಗ್ಗೆ ಅಸ್ಪಷ್ಟ ಭಾವನೆಯನ್ನು ಹೊಂದುವುದು ಸಾಧ್ಯವಿಲ್ಲ.

**ಪಂಚಾಶತ್ತಮದ ದಿನ.**

ಉದಾಹರಣೆಗೆ, ಪಂಚಾಶತ್ತಮದ ದಿನ (ಪೆಂತೆಕೊಸ್ತ) ದಂದು ಹೃದಯದಲ್ಲಿ ಕಳವಳಗೊಂಡವರು, ಪೇತ್ರನನ್ನೂ ಉಳಿದ ಸಹೋದರರನ್ನೂ — ``ಸಹೋದರರೇ, ನಾವೇನು ಮಾಡಬೇಕು'' ಎಂದು ಕೇಳಲು, ಅವರು ಕೊಟ್ಟ ಉತ್ತರ, ``ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು (ಮಾನಸಾಂತರ ಪಟ್ಟು) ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ'' ಎಂಬುದೇ. ಅದೇ ದಿನದಲ್ಲಿ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿದರು (ಅ.ಕೃ.2:37,38,41). ಮುಂದೆ ಓದುವಾಗ, ``ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು, ಸಮಾರ್ಯದವರು ನಂಬಿ, ಗಂಡಸರೂ ಹೆಂಗಸರೂ ದೀಕ್ಷಾಸ್ನಾನ ಮಾಡಿಸಿಕೊಂಡರು (ಅ.ಕೃ.8:12). ಆದ್ದರಿಂದ ನಂಬಿಕೆಗೆ ಪ್ರಥಮ ಗುರುತಾದ ಕಾರ್ಯವೆಂದರೆ ದೀಕ್ಷಾಸ್ನಾನದ ಮೂಲಕ ನಮ್ಮನ್ನು ನಾವು ದೇವರ ಮುಂದೆ ತಗ್ಗಿಸಿಕೊಳ್ಳುವುದು.

---



**ಯೌವನಸ್ಥರಿಗಾಗಿ.**



**ಸತ್ಯವೇದದ ಪುಸ್ತಕಗಳು.**

ಈ ಕೆಳಗಿನ ಕಥೆಗಳು ಮತ್ತು ಘಟನೆಗಳನ್ನು ಕಂಡುಕೊಳ್ಳಲು ಸತ್ಯವೇದದ ಯಾವ ಪುಸ್ತಕಗಳನ್ನು ನೀನು ತೆರೆಯುತ್ತೀಯೆ? ನಮಗೆ ಬರೆದು ತಿಳಿಸಿ.

1. ಪಸ್ಕ ಹಬ್ಬದ ಕಥೆ ?
2. ಯೆಫ್ತಾಹನ ಮತ್ತು ಅವನ ಆತುರದ ಹರಕೆಯ ಕಥೆ?
3. ದೇವರ ಹೆಸರೇ ಬರೆದಿಲ್ಲ ?
4. ಆಕಾನನ ಪಾಪ ಮತ್ತು ಶಿಕ್ಷೆಯ ಕಥೆ ?
5. ಉರಿಯುವ ಬೆಂಕಿಯ ಕುಲುಮೆಯಲ್ಲಿ ಮೂವರು ಯೌವನಸ್ಥರನ್ನು ಹಾಕಿದ ಕಥೆ?
6. ದೊರ್ಕಳನ್ನು ಸತ್ತವರೊಳಗಿಂದ ಎಬ್ಬಿಸಿದ್ದು?
7. ರಹಾಬಳ ಕೆಂಪು ದಾರದ ಕಥೆ?
8. ಸೆರೆಮನೆಯ ಬಾಗಿಲುಗಳನ್ನು ತೆರೆದ ಭೂಕಂಪದ ಕಥೆ?
9. ದಾಗೋನನ ದೇವತೆಯ ಅವನತಿ ?
10. ಜೋಯಿಸರೂ ಮತ್ತು ಅವರ ಕಾಣಿಕೆಗಳ ಕಥೆ? ಎಷ್ಟು ಮಂದಿ ಜೋಯಿಸರು ಬಂದದ್ದು?
11. ಬೆಚಲೇಲನ ಕುಶಲ ಕೈಗಾರಿಕೆಯ ಕಥೆ?
12. ರಾಜನಾದ ನೆಬೂಕದ್ನೆಚರನ ಸ್ವಪ್ನದ ಕಥೆ?
13. ಕರ್ಮೆಲ್ ಬೆಟ್ಟದ ಮೇಲೆ ಎಲೀಯನ ಕಥೆ?
14. ನಾಮಾನನು ಶುದ್ಧನಾದ ಕಥೆ?
15. ದುಷ್ಟ ಹಾಮಾನನೂ ಅವನು ಮಾಡಿಸಿದ ಗಲ್ಲುಗಂಭದ ಕಥೆಯೂ?
16. ಸೊಲೊಮೋನನ ದೇವಾಲಯವನ್ನು ಕಟ್ಟಿದ ಕಥೆ ?

ಸಂಪುಟ 1. | ಸಂಚಿಕೆ 9 /1982

ಪ್ರಕಾಶಕರು:

ದಿ ಕ್ರಿಸ್ತಡೆಲ್ಫಿಯನ್ಸ್,
23/4, ಚೆನ್ನನ ರಸ್ತೆ, ಬೆಂಗಳೂರು 560 046.

# ಯೌವನಸ್ಥರಿಗಾಗಿ

> ಕಷ್ಟದ ದಿನಗಳೂ ಸಂತೋಷವಿಲ್ಲವೆಂದು ನೀನು ಹೇಳುವ ವರುಷಗಳೂ ಸಮೀಪಿಸುವದರೊಳಗಾಗಿ ಯೌವನದಲ್ಲಿಯೇ ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು. — ಪ್ರಸಂಗಿ 12:1.

ಇಂದು ಲೋಕದಲ್ಲಿ ಅದರಲ್ಲೂ ಯೌವನಸ್ಥರಲ್ಲಿ ನೈತಿಕ ಮಟ್ಟವು ಬಹಳಷ್ಟು ಕೆಳಮಟ್ಟಕ್ಕಿಳಿದಿದೆ ಎಂದು ಅನೇಕರು ಹೇಳುತ್ತಾರೆ. ಹೌದು, ಇದು ಬಹು ಮಟ್ಟಿಗೆ ನಿಜವಾಗಿದೆ. ಏಕೆಂದರೆ ಲೋಕದಲ್ಲಿನ ಇಂದಿನ ಪರಿಸ್ಥಿತಿಯನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದಾಗ, ಅದರ ಭೀಕರತೆಯನ್ನು ಎದೆಯನ್ನು ತಲ್ಲಣಗೊಳಿಸುವಂತಿದೆ. ಆದರೆ ಇಲ್ಲಿ ಒಂದು ಪ್ರಶ್ನೆ. ನೈತಿಕ ಮಟ್ಟದ ಅಳತೆಗೋಲು ಯಾವುದು? ಕೆಲವರು ತಮ್ಮ ದೇಶ, ಸಂಸ್ಕೃತಿ, ಸಮಾಜದ ನಡವಳಿಕೆಗಳು ಇವುಗಳ ಮೇಲೆ ನೈತಿಕತೆಯು ಅವಲಂಬಿಸಿರುತ್ತದೆ ಎಂದು ಹೇಳಬಹುದು. ಅಂದರೆ ದೇಶಕ್ಕೆ ತಕ್ಕಂತೆ ಅವರವರ ನಡವಳಿಕೆಗಳಿರುತ್ತವೆ. ಒಂದು ದೇಶ ಅಥವಾ ಜನಾಂಗ ಅಥವಾ ಸಮಾಜಕ್ಕೆ ಸರಿಯಾಗಿ ತೋರುವ ನಡವಳಿಕೆಯು ಮತ್ತೊಂದು ದೇಶಕ್ಕೆ ಅಥವಾ ಜನಾಂಗಕ್ಕೆ ಅಥವಾ ಸಮಾಜಕ್ಕೆ ಅದು ಸರಿ ತೋರದಿರಬಹುದು. ಅಂತಹುದನ್ನು ನೀತಿ ಬಾಹಿರವೆಂದು ಪರಿಗಣಿಸಲು ಸಾಧ್ಯವೇ ಎಂದು ಮತ್ತೆ ಕೆಲವರು ಕೇಳಬಹುದು. ಇದಕ್ಕೆ ಉತ್ತರ ಸತ್ಯವೇದವು ಕೊಡುತ್ತದೆ. ನಾವು ಕ್ರೈಸ್ತರೆನಿಸಿಕೊಂಡವರಿಗೂ ಕೂಡ ಈ ಮಾತು ಅನ್ವಯಿಸುತ್ತದೆ. ಅರಸನಾದ ದಾವೀದನು ಈ ಬಗ್ಗೆ ಏನು ಹೇಳುತ್ತಾನೆ ನೋಡಿ — ಯೌವನಸ್ಥನು ತನ್ನ ನಡತೆಯನ್ನು ಶುದ್ಧಪಡಿಸಿಕೊಳ್ಳುವುದು ಯಾವುದರಿಂದ? ನಿನ್ನ ವಾಕ್ಯವನ್ನು ಗಮನಿಸಿ ನಡೆಯುವುದರಿಂದಲೇ (ಕೀ 119:9). ಇಲ್ಲಿ ನಮಗೊಂದು ಅಳತೆಗೋಲು ಸಿಕ್ಕಿದೆ. ಇದು ಎಲ್ಲಾ ದೇಶಕ್ಕೂ ಎಲ್ಲಾ ಜನಾಂಗಕ್ಕೂ ಎಲ್ಲಾ ಸಮಾಜಕ್ಕೂ ಮತ್ತು ಎಲ್ಲಾ ಕಾಲಕ್ಕೂ ಅನ್ವಯವಾಗುವಂತದ್ದಾಗಿದೆ. ಇಂದು ಯೌವನಸ್ಥರ ನೈತಿಕ ಮಟ್ಟ ಇಳಿದಿದೆ ಎಂದು ಹೇಳಿದಾಗ ಹೇಗೆ, ಯಾವ ರೀತಿಯಲ್ಲಿ ಇಳಿದಿದೆ ಎಂಬುದನ್ನು ಪರಿಶೀಲಿಸಬೇಕು.

ಅನೇಕರು ಹೇಳಬಹುದು — ರೋಂ ಪಟ್ಟಣದಲ್ಲಿದ್ದಾಗ, ರೋಮ್ನವರಂತೆ ಇರಬೇಕು; ಹಾಗೆಯೇ ನಾವು ಒಂದು ದೇಶದಲ್ಲಿ, ಒಂದು ಜನಾಂಗದ ಮಧ್ಯದಲ್ಲಿ ಮತ್ತು ಒಂದು ಸಮಾಜದಲ್ಲಿ ಮಧ್ಯೆ ಇರುವಾಗ, ನಾವೂ ಅವರಂತೆಯೇ ಇರುವುದು ಸರಿಯಲ್ಲವೇ? ಇದನ್ನು ನಿಧಾನವಾಗಿ ಆಲೋಚಿಸಿ. ಈ ರೀತಿಯಾಗಿ ಹೇಳುವವರೂ ಕೂಡ ಅದರಂತೆ ನಡೆಯಲಾರರು. ಏಕೆಂದರೆ, ಆ ರೀತಿ ನಡೆದು ಕೊಳ್ಳುವಾಗ ತಮಗೆ ತೊಂದರೆಯಾಗುವ ಹಾಗಿದ್ದಲ್ಲಿ ಅಥವಾ ತಮಗೆ ಪ್ರಯೋಜನವಿಲ್ಲದಿದ್ದಲ್ಲಿ — ಅಂಥಹ ಸಂದರ್ಭಗಳಲ್ಲಿ ನುಣುಚಿಕೊಳ್ಳುತ್ತಾರೆ. ಇದು ಮಾನವನ ಸಹಜ ಪ್ರಕೃತಿ. ಅದ್ದರಿಂದ ಮೇಲ್ಕಂಡ ಗಾದೆಯನ್ನು ಹೀಗೆ ಪರಿವರ್ತಿಸಿ ಅರ್ಥ ಮಾಡಿಕೊಳ್ಳಬೇಕು — ದೇವರ ಮಕ್ಕಳೆನಿಸಿಕೊಂಡವರು ದೇವರು ಹೇಳಿದ ರೀತಿಯಲ್ಲಿ ನಡೆದುಕೊಳ್ಳಬೇಕು — ಕ್ರೈಸ್ತರೆನಿಸಿಕೊಂಡವರು ಕ್ರಿಸ್ತನಂತೆಯೇ ನಡೆದು ಕೊಳ್ಳಬೇಕು.

ಇಂದು ಲೋಕದಲ್ಲಿ ಮಾನವನಿಗೆ ಮುಖ್ಯವಾಗಿ ಎರಡು ಆಸೆಗಳಿವೆ — ''ಆದಷ್ಟು ಶೀಘ್ರದಲ್ಲಿ ಹೆಚ್ಚು ಧನಿಕನಾಗ ಬೇಕು; ಮತ್ತು ತನ್ನ ಜೀವಿತ ಕಾಲದಲ್ಲಿ ಲೋಕದ ಭೋಗಗಳನ್ನೆಲ್ಲಾ ಅನುಭವಿಸ ಬೇಕು'' ಇದಕ್ಕಾಗಿ ಎಷ್ಟಾದರೂ ಯಾವ ರೀತಿಯಾದರೂ ಕಷ್ಟ ಪಡಲು ಸಿದ್ಧನಾಗಿದ್ದಾನೆ. ಈ ಒಂದು ಪ್ರವೃತ್ತಿಯು ಯೌವನಸ್ಥರ ಮೇಲೆ ಭೀಕರ ಪರಿಣಾಮ ಮಾಡಿದೆ. ಲೋಕದಲ್ಲಿರುವ ಭೋಗವಿಲಾಸಗಳನ್ನೆಲ್ಲಾ ತಮ್ಮ ಯೌವನ ಪ್ರಾಯದಲ್ಲಿಯೇ ಆದಷ್ಟು ಬೇಗ ಅನುಭವಿಸಿ ಬಿಡಬೇಕು. ಇದಕ್ಕಾಗಿ ತಂದೆತಾಯಿಗಳ ವಿರುದ್ಧ ಹೋರಾಡಲೂ ಸಿದ್ಧ; ಗುರುಹಿರಿಯರ ಮಾತು ಕೂಡ ಕಿವಿಗೆ ಬೀಳುವುದಿಲ್ಲ. ತಾವು ಮಾಡುತ್ತಿರುವುದು ಸರಿಯೆಂದೇ ಅವರ ಭಾವನೆ. ಈ ಸಂದರ್ಭದಲ್ಲಿ ಜ್ಞಾನಿಯಾದ ಸೊಲೊಮೋನನು ಹೇಳುವುದನ್ನು ಕೇಳೋಣ: ''ಯೌವನಸ್ಥನೇ, ಪ್ರಾಯದಲ್ಲಿ ಆನಂದಿಸು; ಯೌವನದ ದಿನಗಳಲ್ಲಿ ಹೃದಯವು ನಿನ್ನನ್ನು ಹರ್ಷಗೊಳಿಸಲಿ; ಮನಸ್ಸಿಗೆ ತಕ್ಕಂತೆಯೂ ಕಣ್ಣಿಗೆ ಸರಿ ಬೀಳುವ ಹಾಗೆಯೂ ನಡೆದುಕೋ'' (ಪ್ರಸಂಗಿ 11:9). ಇದನ್ನು ಓದುವಾಗ ಅನೇಕ ಯೌವನಸ್ಥರಿಗೆ ಸಂತೋಷವಾಗ ಬಹುದು. ಜ್ಞಾನಿಯಾದ ಸೊಲೊಮೋನನೇ ಈ ರೀತಿಯಾಗಿ ಹೇಳಿದ ಮೇಲೆ, ನಮ್ಮದೇನಿದೆ? ಅದರಂತೆ ನಾವು ನಡೆಯುವುದರಲ್ಲಿ ತಪ್ಪೇನು? ಈ ಮುಂತಾದ ಪ್ರಶ್ನೆಗಳು ಅವರಲ್ಲಿ ಏಳುತ್ತವೆ. ಹೌದು, ಜ್ಞಾನಿಯಾದ ಸೊಲೊಮೋನನ ವಾಕ್ಯಗಳು ಸರಿಯಾದವುಗಳೇ. ಅವುಗಳನ್ನು ಅನುಸರಿಸುವುದರಲ್ಲಿ ತಪ್ಪೇನಿಲ್ಲ. ಆದರೆ ಅವುಗಳನ್ನು ಪೂರ್ಣವಾಗಿ ಓದಿ ಅರ್ಥ ಮಾಡಿಕೊಂಡರೆ ಸರಿ. ಅದೇ ವಚನವನ್ನು ಮುಂದುವರಿಸಿ 10ನೇ ವಚನದವರೆಗೆ ಸ್ವಲ್ಪ ಸಾವಧಾನವಾಗಿ ಓದಿ. ಅದೇ ಸೊಲೊಮೋನನು ಯೌವನಸ್ಥರಿಗೆ ಎಚ್ಚರಿಕೆ ನೀಡುತ್ತಾನೆ: ''ಆದರೆ ಈ ಎಲ್ಲಾ ವಿಷಯಗಳಲ್ಲಿಯೂ ದೇವರು ನಿನ್ನನ್ನು ನ್ಯಾಯ ವಿಚಾರಣೆಗೆ ಗುರಿಮಾಡುವನೆಂದು ತಿಳಿದಿರು. ನಿನ್ನ ಹೃದಯದಿಂದ ಕರಕರೆಯನ್ನೂ ದೇಹದಿಂದ ಶ್ರಮೆಯನ್ನೂ ತೊಲಗಿಸು; ಬಾಲ್ಯವೂ ಪ್ರಾಯವೂ ವ್ಯರ್ಥ

ಯಾವನಾದರೂ, ನೀವು ಕೇಳಬಹುದು — ನಮಗೆ ಹಕ್ಕಿಲ್ಲವೇ? ನಮಗೇಕೆ ನೀವು ಇಷ್ಟೊಂದು ಕಷ್ಟ ಕೊಡುತ್ತೀರಿ? ಎಂದು. ಅಪೋಸ್ತಲನಾದ ಪೇತ್ರನು ಈ ವಿಷಯದಲ್ಲಿ ಒಂದು ಎಚ್ಚರಿಕೆಯನ್ನು ಕೊಡುತ್ತಾನೆ. ''ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ'' (1 ಪೇತ್ರ 3:12) ನಾವು ಕ್ರಿಸ್ತನವರಾದ ಮೇಲೆ, ಕ್ರೈಸ್ತ ಕುಟುಂಬದಲ್ಲಿ ಹುಟ್ಟಿದವರಾದಮೇಲೆ, ನಮ್ಮ ನಡತೆ ಹೇಗಿರಬೇಕು ? ಅಪೋಸ್ತಲನಾದ ಯೋಹಾನನು ಈ ವಿಷಯದಲ್ಲಿ ಸ್ಪಷ್ಟವಾಗಿ ತಿಳಿಸುತ್ತಾನೆ — ''ಲೋಕವನ್ನಾಗಲೀ ಲೋಕದಲ್ಲಿರುವವುಗಳನ್ನಾಗಲೀ ಪ್ರೀತಿಸಬೇಡಿರಿ, ಯಾವನಾದರೂ ಲೋಕವನ್ನು ಪ್ರೀತಿಸಿದರೆ, ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ, ಕಣ್ಣಿನಾಶೆ, ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವೂ ತಂದೆಯಿಂದ ಹುಟ್ಟದೆ, ಲೋಕದಿಂದ ಹುಟ್ಟಿದವುಗಳಾಗಿವೆ. ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು.'' ಈ ವಾಕ್ಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ, ನಾವು ಯಾವ ರೀತಿಯಲ್ಲಿ ಈ ಲೋಕದಲ್ಲಿ ಬಾಳಬೇಕೆಂದು ಸ್ಪಷ್ಟವಾಗಿ ತಿಳಿಸಿದೆ. ಸತ್ಯವೇದದಲ್ಲಿ ಇಂದಿನ ಕೆಲವು ವಿಷಯಗಳಾದ — ಚಲನಚಿತ್ರ ನೋಡುವುದು, ಧೂಮಪಾನ ಮಾಡುವುದು, ನೃತ್ಯ, ಕುಣಿತ ಮುಂತಾದವುಗಳ ಬಗ್ಗೆ ನೇರವಾಗಿ ಹೇಳದಿದ್ದರೂ, ಕ್ರಿಸ್ತ ಜೀವಿತವನ್ನು ಸರಿಯಾದದ್ದೆಂದು ಅಂಗೀಕರಿಸಿದ್ದಲ್ಲಿ, ಆಗ ಈ ವಿಷಯಗಳ ಬಗ್ಗೆ ಹೊಸ ರೀತಿಯಲ್ಲಿ ನೋಡಬೇಕಾಗುತ್ತದೆ.

ನಾವು ಇಂದಿನ ಸಾಮಾಜಿಕ ಜೀವನದಲ್ಲಿ ನೃತ್ಯ ಹಾಗೂ ಚಲನಚಿತ್ರ ಬೇಕೇ ಬೇಕೆನ್ನುವ ಸ್ನೇಹಿತರೊಂದಿಗೆ ಬಹಳಷ್ಟು ಸೇರಿದಲ್ಲಿ, ಕ್ರಿಸ್ತನಿಗಾಗಿ ನಮಗೆ ಕೊಂಚ ಸಮಯವೂ ಸಿಗಲಾರದು. ಅಥವಾ ನಾವು ಅಂಥಹ ಗುಂಪಿನೊಂದಿಗೆ ಧೂಮಪಾನ ಅಥವಾ ಮದ್ಯಪಾನ ಮಾಡಲು ಸೇರಲು ಅರ್ಹರೆಂದು ಪರಿಗಣಿಸಿದಲ್ಲಿ, ಅವರು ಏನೆಂದುಕೊಳ್ಳುತ್ತಾರೋ, ಏನು ಮಾಡುತ್ತಾರೋ ಎಂಬುವುದೇ ಕ್ರಿಸ್ತನಿಗಿಂತ ಹೆಚ್ಚು ಮುಖ್ಯವಾದದ್ದಾಗಿರುತ್ತದೆ.

ಕ್ರಿಸ್ತನನ್ನು ಹೊರದೂಡುವಂತ ಯಾವುದೇ ದುರಭ್ಯಾಸವೂ ನಮ್ಮ ಜೀವಿತದಲ್ಲಿ ಕಾಣಬಾರದು. ನಾವು ಬಿಡಲಾರದಂಥ ಕೆಟ್ಟದ್ದು ನಮ್ಮ ಮೇಲೆ ಹತೋಟಿ ಹೊಂದಿರಬಾರದು. ಧೂಮಪಾನವೆಂಬುದು ಒಂದು ಚಟ. ಇದು ಕ್ರಮೇಣ ನಿಕೊಟಿನ್ ವಿಷಕ್ಕೆ ಹಾತೊರೆಯುವಂತೆ ಮಾಡಿ, ಮನುಷ್ಯನನ್ನು ತನ್ನ ಗುಲಾಮನನ್ನಾಗಿ ಮಾಡುತ್ತದೆ. ಧೂಮಪಾನ ಮಾಡುವುದರಿಂದ ನಿಸ್ಸಂದೇಹವಾಗಿ ಕೆಡುಕುಂಟಾಗುತ್ತದೆಂದು ಸಾಧಿಸಿ ತೋರಿಸಿದ್ದಾರೆ. ಆದ್ದರಿಂದ ಅದು ಕೇವಲ ಹುಚ್ಚುತನವಲ್ಲದೆ ನಮ್ಮನ್ನು ನಾವೇ ಬೇಕಾಗಿ ವಿಷಪೂರಿತವಾಗಿ ಮಾಡಿಕೊಳ್ಳುವುದು ಅಕ್ರೈಸ್ತತ್ವವಾಗಿದೆ. ಪೌಲನು ಕೊರಿಂಥದವರಿಗೆ ಬರೆಯುತ್ತಾ ಹೀಗೆ ತಿಳಿಸುತ್ತಾನೆ — ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಯೆಂದು ನಿಮಗೆ ತಿಳಿಯದೋ?(1 ಕೊರಿ 6:19).. ನಾವು ದೇವರನ್ನು ಮುಂದಿಟ್ಟುಕೊಂಡರೆ ಇವೆಲ್ಲವುಗಳ ಪರಿಣಾಮವು ಗೋಚರವಾಗಿ ಅವುಗಳ ಬಗ್ಗೆ ನಿರ್ಧರಿಸುವುದು ಬಹು ಸುಲಭವಾಗುತ್ತದೆ.

## ಮಕ್ಕಳಿಗಾಗಿ

ಪ್ರಿಯ ಮಕ್ಕಳಿರಾ, ನೀವೆಲ್ಲರೂ ನಿಮ್ಮ ತಂದೆತಾಯಿಗಳೊಂದಿಗೆ ಪ್ರತಿ ಭಾನುವಾರ ಬೆಳಿಗ್ಗೆ ದೇವಾಲಯಕ್ಕೆ ಹೋಗುವಿರಲ್ಲವೇ? ಅಲ್ಲಿ ನೀವು ಕಾಣುವುದೇನು? ಎಲ್ಲರೂ ಒಂದಾಗಿ ಸೃಷ್ಟಿಕರ್ತನಾದ ದೇವರನ್ನೂ, ನಮ್ಮ ರಕ್ಷಕನೂ ದೇವರ ಮಗನೂ ಆದ ಯೇಸುಕ್ರಿಸ್ತನನ್ನು ಕೊಂಡಾಡಿ, ಸತ್ಯವೇದದ ಮೂಲಕ ಅವರ ವಿಷಯವನ್ನು ತಿಳಿಯುವಿರಲ್ಲವೇ? ಆದರೂ ಅನೇಕ ಮಕ್ಕಳಿಗೆ ತಾವಿರುವ ಸ್ಥಳಗಳಲ್ಲಿ ಈ ಅನುಕೂಲವಿರುವುದಿಲ್ಲ. ನಿಮಗೂ ಅಂಥವರಿಗೂ ಈ ಸಂಚಿಕೆಯಿಂದ ಒಂದು ಪುಟವನ್ನು ಕಾದಿರಿಸಲು ನನಗೆ ಪ್ರೇರಣೆಯಾಯಿತು. ದೈವಸಹಾಯದಿಂದ ಸಾಧ್ಯವಾದಷ್ಟು ನಿಮಗೆ ಸತ್ಯವೇದದಲ್ಲಿರುವ ತಂದೆಯಾದ ದೇವರ ಹಾಗೂ ಮಾನವನಾಗಿದ್ದು ನಮಗಾಗಿ ಪ್ರಾಣಕೊಟ್ಟ ಆತನ ಕುಮಾರನಾದ ಯೇಸುಕ್ರಿಸ್ತನ ವಿಷಯವಾಗಿಯೂ ದೇವರು ಮನುಷ್ಯನಿಗೆ ಕೊಡಲ್ಪಟ್ಟಿರುವ ರಕ್ಷಣೆಯ ಮಾರ್ಗದ ವಿಷಯವಾಗಿಯೂ ಈ ಪತ್ರಿಕೆಯ ಮೂಲಕ ತಿಳಿಸಲು ಪ್ರಯತ್ನಿಸುತ್ತೇನೆ. ಈ ಸಂದರ್ಭದಲ್ಲಿ ನಿಮ್ಮಲ್ಲಿ ನನ್ನ ಒಂದೇ ಒಂದು ಕೋರಿಕೆಯೇನೆಂದರೆ, ನೀವುಗಳು ಪ್ರತಿದಿನವೂ ಸತ್ಯವೇದವನ್ನು ಓದುವ ಅಭ್ಯಾಸ ಇಟ್ಟುಕೊಳ್ಳಬೇಕು. ಕ್ರಮವಾಗಿ ಓದಲು ನಿಮ್ಮಲ್ಲಿ ಉಚಿತವಾಗಿ ಒಂದು ಪುಸ್ತಕವು ದೊರೆಯುತ್ತದೆ. ನೀವು ನನಗೆ (2ನೆ ಪುಟದ ವಿಳಾಸಕ್ಕೆ) ಬರೆದರೆ, ನಾನು ಉಚಿತವಾಗಿ ಕಳುಹಿಸುತ್ತೇನೆ. ನಿಮ್ಮ ಪ್ರಶ್ನೆಗಳಿಗೂ (ಸತ್ಯವೇದಕ್ಕೆ ಸೇರಿದ) ಉತ್ತರ ಕೊಡುತ್ತೇನೆ. ನಿಮ್ಮ ಈ ಪ್ರಯತ್ನದಲ್ಲಿ ದೇವರು ನಿಮ್ಮನ್ನು ಆಶೀರ್ವದಿಸಲಿ.

ಭಾ. ದಂದುದಾಸ್.

# ಪ್ರಶ್ನೆ ಉತ್ತರ

## ಸತ್ಯವೇದ(ಬೈಬಲ್) ಎಂದರೇನು?

ಸತ್ಯವೇದ ಅಥವ ಬೈಬಲ್ ಎಂಬುವದು ದೇವರ ವಾಕ್ಯವಾಗಿದೆ. ಏಕೆಂದರೆ ದೇವರು ತನ್ನ ಬಾಯಿಯಿಂದ ಹೇಳಿದ್ದನ್ನು ಪ್ರವಾದಿಗಳು ಆತನ ಭಕ್ತರು ಮತ್ತು ಅಪೊಸ್ತಲರು ಬರೆದಿರುತ್ತಾರೆ. ಈ ವಾಕ್ಯಗಳು ದೇವರ ಪ್ರೇರಣೆಯಿಂದಲೇ ಬರೆದಿರುವುದರಿಂ ಅವುಗಳು ಸತ್ಯವಾಕ್ಯಗಳಾಗಿವೆ. ನೀವು ಅದನ್ನು ಪ್ರತಿದಿನ ಓದುವಾಗ ಒಂದು ಅದ್ಭುತವಾದ ಪುಸ್ತಕವನ್ನು ಓದುತ್ತೀರಿ. ದೇವರು ಈ ಪುಸ್ತಕವನ್ನು ಬರೆಯಿಸಿ, ತನ್ನ ಮಹಿಮೆಯಿಂದ ಭೂಮಿಯೆಲ್ಲಾ ತುಂಬಿಸಬೇಕೆಂಬುದನ್ನು ಮನುಷ್ಯರೆಲ್ಲರಿಗೆ ತಿಳಿಸಬೇಕೆಂದು ಸಾವಿರಾರು ವರ್ಷಗಳಿಂದಲೂ ಅದನ್ನು ಸುರಕ್ಷಿತವಾಗಿ ಇಟ್ಟಿದ್ದಾನೆ. ಅದು ನಮ್ಮ ಮೇಲೆ ದೇವರಿಗಿರುವ ಪ್ರೀತಿಯನ್ನೂ ಮತ್ತು ಯೇಸುಕ್ರಿಸ್ತನು ಇದ್ದಕ್ಕಿದ್ದಂತೆ ಈ ಭೂಮಿಗೆ ಹಿಂದಿರುಗಿ ಬಂದು, ತನ್ನ ತಂದೆಯಾದ ದೇವರ ಮಹಿಮೆಯ ರಾಜ್ಯವನ್ನು ಸಾಧಿಸುವಂತ ಸಂತೋಷದ ಸಂದರ್ಭದಲ್ಲಿ —— ನಾವೂ ಕೂಡ ಅದರಲ್ಲಿ ಹೇಗೆ ಸೇರಬಹುದೆಂಬುದನ್ನು ತಿಳಿಸುತ್ತದೆ.

ಸತ್ಯವೇದದ ಪ್ರಾರಂಭದ ಪುಸ್ತಕದಲ್ಲಿ ದೇವರು ಹೇಗೆ ಆಕಾಶವನ್ನೂ ಭೂಮಿಯನ್ನೂ ಭೂಮಿಯಲ್ಲಿರುವ ಎಲ್ಲಾ ಪಕ್ಷಿ, ಪ್ರಾಣಿ, ಮರಗಿಡಗಳೂ ಮತ್ತು ಮನುಷ್ಯನನ್ನೂ ಉಂಟು ಮಾಡಿದನು ಎಂಬುದನ್ನು ತಿಳಿದು ಕೊಳ್ಳ ಬಹುದು.

ದೇವರು ತನ್ನ ಆತ್ಮದಲ್ಲಿ ( Spirit )ಎಲ್ಲೆಲ್ಲಿಯೂ ಇರುತ್ತಾನೆ. ಆತನ ವಾಕ್ಯವನ್ನು ಯಾರಾರು ಪ್ರತಿದಿನವೂ ಓದುತ್ತಾರೋ ಅವರಲ್ಲಿ ಅವನು ಸಂತೋಷ ಪಡುತ್ತಾನೆ. ಅವರನ್ನು ಕಾಪಾಡಿ, ಆಶೀರ್ವದಿಸುತ್ತಾನೆ. ಯೇಸುಕ್ರಿಸ್ತನು ಅವರೊಂದಿಗೆ ಯಾವಾಗಲೂ ಇರುವುದಾಗಿ ಮಾತು ಕೊಟ್ಟಿದ್ದಾನೆ. ಅವರು ಎಂದಿಗೂ ಸ್ನೇಹಿತರಿಲ್ಲದೆ ಅಥವ ಒಂಟಿಯಾಗಿ ಇರುವುದಿಲ್ಲ.

ಆತನ ಅದ್ಭುತವಾದ ಪುಸ್ತಕವನ್ನು ಓದಲು ದೇವರ ಸಹಾಯವನ್ನು ಕೋರಿ ಪ್ರಾರ್ಥನೆ ಮಾಡು. ನಿನ್ನ ಸ್ನೇಹಿತರಿಗೂ ಅದನ್ನು ಓದಲು ಹೇಳು.

ಭಾ. ಚಂದುದಾಸ.

## ಮೂಲ ನಂಬಿಕೆಗಳು.

### ಕ್ರಿಸ್ತನ ಆಜ್ಞೆಗಳನ್ನು ಕುರಿತದ್ದು.

1. ನಮ್ಮ ಆಚರಣೆಗೆ ಕ್ರಿಸ್ತನು ಯಾವ ಇತರ ಆಜ್ಞೆಗಳನ್ನು ಕೊಟ್ಟನು?

ಆತನನ್ನು ನೆನಸಿ ಕೊಳ್ಳಲು ನಾವೆಲ್ಲರೂ ಒಟ್ಟಾಗಿ ಕೂಡಿ ಒಂದು ವಾರದ ಮೊದಲನೆಯ ದಿನದಲ್ಲಿ ರೊಟ್ಟಿ ಮುರಿದು ದ್ರಾಕ್ಷಾರಸವನ್ನು ಕುಡಿಯಲು ಆಜ್ಞಾಪಿಸಿದನು.

1 ಕೊರಿಂಥ 11:23—25; ಅ.ಕೃ.20:7; ಇಬ್ರಿಯ 10:25; 1 ಕೊರಿ 16:2.

2. ನಾವು ವಿಧೇಯರಾಗ ಬೇಕಾದ ಇತರ ಆಜ್ಞೆಗಳು ಇನ್ನೂ ಇವೆಯೋ?

ಹೌದು, ಅನೇಕ ಇವೆ. ಕೆಲವು ಆಜ್ಞೆಗಳು ನಾವು ಏನನ್ನು ಮಾಡಬೇಕೆಂದೂ, ಇತರ ಆಜ್ಞೆಗಳು ನಾವು ಏನನ್ನು ಮಾಡ ಬಾರದೆಂದೂ ತಿಳಿಸುತ್ತವೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಟ್ಟಿದೆ.

(1) ನಾವು ದೇವರನ್ನೂ ಕ್ರಿಸ್ತನನ್ನೂ ಪ್ರೀತಿಸ ಬೇಕು;(2)ಇತರರು ನಮಗೆ ಏನನ್ನು ಮಾಡ ಬೇಕೆಂದು ನಾವು ಬಯಸುತ್ತೇವೋ ಅದನ್ನೇ ನಾವು ಅವರಿಗೆ ಮಾಡ ಬೇಕು; ಒಬ್ಬರನ್ನೊಬ್ಬರು ಪ್ರೀತಿಸ ಬೇಕು; ಇತರರ ಸಂತೋಷ ಹಾಗೂ ದುಃಖದಲ್ಲಿ ಭಾಗಿಗಳಾಗುವುದು; (5) ನಿಮ್ಮ ವೈರಿಗಳನ್ನು ಪ್ರೀತಿಸಿರಿ, ನಿಮ್ಮನ್ನು ಹಗೆ ಮಾಡುವವರಿಗೆ ಉಪಕಾರ ಮಾಡಿರಿ, ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ, ನಿಮ್ಮನ್ನು ಬಯ್ಯುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ;(6) ಸಕಲ ಸತ್ಕಾರ್ಯಗಳನ್ನು ಮಾಡಲು ಸಿದ್ಧರಿರ ಬೇಕು, ಬೇಡುವವರಿಗೆ ನೀಡ ಬೇಕು ಮತ್ತು ತೊಂದರೆಗೊಳಗಾದವರಿಗೆ ಸಹಾಯ ಮಾಡ ಬೇಕು; (7) ಕೆಟ್ಟ ಯಜಮಾನರಿಗೂ ಕೂಡ ನಂಬಿಕೆಯಿಂದ ಸೇವೆ ಮಾಡ ಬೇಕು;(8) ಯಾವಾಗಲೂ ಪ್ರಾರ್ಥನೆ ಮಾಡಬೇಕು ಮತ್ತು ಪ್ರತಿಯೊಂದರಲ್ಲಿಯೂ ಕೃತಜ್ಞತೆಯುಳ್ಳವರಾಗಿರ ಬೇಕು. (9) ಯಾವಾಗಲೂ ಸತ್ಯವನ್ನೇ ನುಡಿಯಬೇಕು;ನಿರ್ದೋಷಿಗಳಾಗಿಯೂ ಕೆಡುಕಿಲ್ಲದವರಾಗಿಯೂ ಇರಬೇಕು;(11) ದೀನರಾಗಿಯೂ, ಧೈರ್ಯವಂತರಾಗಿಯೂ, ಸಂತೋಷಿಸುವವರೂ ವಿನಯವುಳ್ಳವರೂ, ಯೋಗ್ಯ ಗುಣವುಳ್ಳವರೂ ಆಗಿರಬೇಕು. (12)ಯಾವುದು ಸತ್ಯವಾದದ್ದು, ಯಥಾರ್ಥವಾದದ್ದು, ಶುದ್ಧವಾದದ್ದು, ನ್ಯಾಯವಾದದ್ದು, ಪ್ರೀತಿಯುಳ್ಳದ್ದು ಮತ್ತು ಒಳ್ಳೆಯ ವಿಷಯಗಳನ್ನುಳ್ಳದ್ದು ಅಂಥವುಗಳನ್ನು ನಾವು ಅನುಸರಿಸಬೇಕು (1ನೇ ಸಂಚಿಕೆ ನೋಡಿ).

# ಸಾಕ್ಷ್ಯ ದೀಪ



ಸತ್ಯವೇದ.

ಬಿಟ್ಟಿರುವ ಸ್ಥಳಗಳನ್ನು ಆವರಣದಲ್ಲಿರುವ ಪದವನ್ನು ಸೇರಿಸಿ ಬರೆಯಿರಿ:—

1. ಸತ್ಯವೇದವು ............. ವಾಕ್ಯವಾಗಿದೆ (ಮನುಷ್ಯರ, ದೇವರ, ದೇವದೂತರ )
2. ಸತ್ಯವೇದವನ್ನು ............ ಬರೆದರು (ದೇವರು, ಯೇಸುಕ್ರಿಸ್ತನು, ದೇವದೂತರು, ಮನುಷ್ಯರು ).
3. ಸತ್ಯವೇದವು .................... ಹುಟ್ಟಿತು (ಮನುಷ್ಯ ಕಲ್ಪನೆಯಿಂದ, ದೇವರ ಪ್ರೇರಣೆಯಿಂದ ).
4. ಸತ್ಯವೇದವು ಒಂದು ............ ಪುಸ್ತಕವಾಗಿದೆ (ಸಾಮಾನ್ಯ, ಪ್ರಯೋಜನವಿಲ್ಲದ, ಅದ್ಭುತ ).
5. ಸತ್ಯವೇದವನ್ನು ಓದುವುದರಿಂದ ದೇವರ ............ ನಮ್ಮ ಮೇಲೆ ಎಷ್ಟಿದೆ ಯೆಂಬುದನ್ನು ತಿಳಿದು ಕೊಳ್ಳಬಹುದು (ಹೊಟ್ಟೆಕಿಚ್ಚು, ಕೋಪ, ಪ್ರೀತಿ)
6. ಸತ್ಯವೇದದಲ್ಲಿ ............ ದೇವರ ರಾಜ್ಯದಲ್ಲಿ ಸಿಕ್ಕುವ ಮಹಿಮೆಯನ್ನು ತಿಳಿಯಬಹುದು (ಪ್ರಾಣಿಗಳಿಗೆ, ಪಕ್ಷಿಗಳಿಗೆ, ಮನುಷ್ಯರಿಗೆ, ಮರಗಳಿಗೆ ).
7. ಸತ್ಯವೇದವು ಮನುಷ್ಯನು ............ ದಿಂದ ಪಾರಾಗಿ ............ ಹೊಂದುವುದನ್ನು ತಿಳಿಸುತ್ತದೆ (ಮುದಿತನ, ಪ್ರಾಯ, ಮರಣ, ಜೀವ ಬಾಲ್ಯ, ಯೌವನ, ನಿತ್ಯಜೀವ )
8. ಸತ್ಯವೇದವು ಯೇಸುಕ್ರಿಸ್ತನು ಈ ಭೂಮಿಗೆ ............ ಬರುವುದನ್ನು ತಿಳಿಸುತ್ತದೆ (ಮುಂದಾಗಿ, ಗೊತ್ತಾದ ದಿನ, ಇದ್ದಕ್ಕಿದ್ದಂತೆ ).
9. ಸತ್ಯವೇದವನ್ನು ಓದುವವರನ್ನು ದೇವರು ............ ತ್ತಾನೆ. (ಖಂಡಿಸು, ದ್ವೇಷಿಸು, ಮೆಚ್ಚು, ಶಿಕ್ಷಿಸು ).
10. ಸತ್ಯವೇದವನ್ನು ಓದುವವರೊಂದಿಗೆ ಯಾವಾಗಲೂ ............ ಇರುತ್ತಾನೆ (ಸ್ನೇಹಿತ, ಅಣ್ಣ / ತಮ್ಮ ಯೇಸುಕ್ರಿಸ್ತನು )

ಮೇಲ್ಕಂಡ ವಾಕ್ಯಗಳನ್ನು ಪೂರ್ಣಗೊಳಿಸಿ 2ನೇ ಪುಟದಲ್ಲಿರುವ ಬೆಂಗಳೂರಿನ ವಿಳಾಸಕ್ಕೆ ಕಳುಹಿಸಿ.

ಹೆಸರು: .................................... ವಯಸ್ಸು .....

ತರಗತಿ: ..................

ವಿಳಾಸ: ..............................

ಊರು: ................ ತಾಲ್ಲೂಕು ........

ಪಿನ್ : .............. ಜಿಲ್ಲೆ. ..............

ಬರೆದು ಕಳುಹಿಸಿ.

ಒಂದೇ ತರದ ಸಂಖ್ಯೆಗಳುಳ್ಳ ಆಕೃತಿಗಳನ್ನು ಹನ್ನೊಂದೇ ಸರಳ ರೇಖೆಗಳಿಂದ ಕೂಡಿಸ ಬೇಕು. ರೇಖೆಗಳು ಒಂದನ್ನೊಂದು ದಾಟ ಬಾರದು ಅಥವಾ ಆಕೃತಿಗಳನ್ನು ಛೇದಿಸ ಬಾರದು.

